OS No. 19/2015

PW-2

**(ಇಂದು ದಿಃ 20-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**

ಮಧ್ಯಂತರ ಅರ್ಜಿ ಆದೇಶದ ಮೇರೆಗೆ ಮುಂದುವರೆದ **ಪಾಟೀ ಸವಾಲುಃ- ಶ್ರೀ.HSR ವಕೀಲರಿಂದಃ-**

ನಿಪಿ-84 ನ್ನು ಯಾವ ದಿನ ಬರೆದುಕೊಟ್ಟಿದ್ದಾರೆ ದಿನಾಂಕ ಗೊತ್ತಿಲ್ಲ. ನಿಪಿ-84 ನ್ನು 2015 ರಲ್ಲಿ ಬರೆದುಕೊಟ್ಟಿದ್ದಾರೆ . 2015 ರಲ್ಲಿ ಶಾಮಮ್ಮರವರಿಗೆ 80 ವರ್ಷ ವಯಸ್ಸು ಆಗಿತ್ತು. ಶಾಮಮ್ಮ ನಡೆದಾಡಿಕೊಂಡು ಚೆನ್ನಾಗಿದ್ದರು ಎಂದರೆ ಸರಿ. ನನ್ನ ತಂದೆ ಮೋಗಲಪ್ಪನಿಗೆ 2015 ರಲ್ಲಿ 60 ವರ್ಷ. ನಿಪಿ-84 ನ್ನು To deal with the case in OS No.19/2015 ಎಂದು ಬರೆದಿದ್ದಾರೆ ಎಂದರೆ ಸರಿ. 2ನೇ ಪುಟದಲ್ಲಿ Withdraw and receive ------ for the same ಎಂದು ಬರೆದಿದ್ದಾರೆ ಎಂದರೆ ಸರಿ. 2015 ರಲ್ಲಿ ನನಗೆ 35 ವರ್ಷ ವಯಸ್ಸು ನಿಪಿ-84 ಮಾಡುವಾಗ ಮೋಗಲಪ್ಪ , ಶಾಮಮ್ಮ ಮತ್ತು ಯಲ್ಲಪ್ಪ ಬಂದಿದ್ದರು.

ನಿಪಿ-85 ಶಾಮಮ್ಮನವರ ಹೆಸರಿನಲ್ಲಿದೆ ಎಂದರೆ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಕಾಲಂ ನಂಬರ 12 ರಲ್ಲಿ ಭೀಮಮ್ಮ , ಶಾಮಮ್ಮ , ಮೋಗಲಪ್ಪ , ಶೇಖರ , ಮಾಣೀಕಪ್ಪ , ಚಂದ್ರಪ್ಪ , ಸಾಯಪ್ಪ ಮತ್ತು ಚಾನಕಮ್ಮ ರವರ ಹೆಸರುಗಳು ಇವೆ ಎಂದರೆ ಸರಿ. ಮೇಲಿನವರೆಲ್ಲಾ ಸದರಿ ಜಮೀನಿನಲ್ಲಿ ಪಾಲು ಹೊಂದಿದ್ದಾರೆ . ಸರ್ವೆ ನಂಬರ 363, 379, 254, 36, 35 ಗಳಲ್ಲಿ ಹೆಸರಿರುವ ವ್ಯಕ್ತಿಗಳ ನಮಗೆ ಸಂಬಂದಪಟ್ಟವರು ಇದ್ದಾರೆ . ಸರ್ವೆ ನಂಬರ 185 ರಲ್ಲಿ 6 ತುಕಡಿಗಳು ಇವೆ . ಸದರಿ 6 ತುಕಡಿಗಳು ಯಾರ ಯಾರ ಹೆಸರಿನಲ್ಲಿವೆ ಎಂದರೆ ನನಗೆ ಗೊತ್ತಿಲ್ಲ, ಸದರಿ ತುಕಡಿಗಳು ಯಾರ ಯಾರ ಬಾಗಕ್ಕೆ ಬಂದಿವೆ ನನಗೆ ಗೊತ್ತಿಲ್ಲ, ಯಾರು ಯಾರಿಗೆ ಎಷ್ಟು ವಿಸ್ತಿರ್ಣ ದ ಜಮೀನು ಗಳು ಬಂದಿವೆ ನನಗೆ ಗೊತ್ತಿಲ್ಲ, ಸರ್ವೆ ನಂಂಬರ 363 3 ಎಕರೆ 9 ಗುಂಟೆ ಇದೆ. ಸದರಿ ಜಮೀನಿನಲ್ಲಿ ನಾನು ಕಬ್ಜಾದಲ್ಲಿದ್ದೇನೆ ಸದರಿ ಜಮೀನಿನಲ್ಲಿ ಈ ವರ್ಷ ಹತ್ತಿ ಬೆಳೆದಿದ್ದೇನೆ . ಹಿಂದಿನ ವರ್ಷ ತೊಗರಿ ಬೆಳೆದಿದ್ದೆ. ಹಿಂದಿನ ವರ್ಷ 12 ಚೀಲ ತೊಗರಿ ಆಗಿವೆ. ಸದರಿ ತೊಗರಿ ಮಾರಾಟ ಮಾಡಿದ್ದೇನೆ ಆ ಬಗ್ಗೆ ರಶೀದಿ ಹಾಜರುಪಡಿಸಿಲ್ಲ, ಈ ವರ್ಷ ಹತ್ತಿ ಮಾರಾಟ ಮಾಡಿದ ಬಗ್ಗೆ ಕೂಡ ರಶೀದಿ ಹಾಜರುಪಡಿಸಿಲ್ಲ, ನಾನು ಸದರಿ ಜಮಿನಿನಲ್ಲಿ ಯಾವತ್ತು ಕಬ್ಜಾದಲ್ಲಿ ಇಲ್ಲ

OS No. 19/2015

PW-2

ಎಂದರೆ ಸರಿಯಲ್ಲ, 2015 ರಿಂದ ಇಲ್ಲಿಯವರೆಗೆ ನಾವು ಜಮೀನಿನ ಕಬ್ಜಾದಲಿಲ ಇಲ್ಲ, ಬೆಳೆ ಬೆಳೆದಿಲ್ಲ , ಮಾರಾಟ ಮಾಡಿಲ್ಲ ಕಾರಣ ರಶೀದಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಉಳಿದ ಜಮೀನುಗಳಲ್ಲಿ ಕೂಡ ನಾವು ಕಬ್ಜಾದಲ್ಲಿ ಇಲ್ಲ ಬೆಳೆ ಬೆಳೆದಿಲ್ಲ, ಮಾರಾಟ ಮಾಡಿಲ್ಲ ಕಾರಣ ರಶೀದಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

ಸರ್ವೇ ನಂಬರ 363 ರಲ್ಲಿ ಈ ವರ್ಷ ತೋಗರಿ ಬೆಳೆ ಇತ್ತು ಎಂದರೆ ಸರಿಯಲ್ಲಸರ್ವೇ ನಂಬರ 185 ರಲ್ಲಿ ತೊಗರಿ ಮತ್ತು ಹತ್ತಿ ಬೆಳೆ ಎಂದರೆ ಸರಿಯಲ್ಲ. ಸರ್ವೇ ನಂಬರ 254 ರಲ್ಲಿ ತೊಗರಿ ಬೆಳೆ ಇತ್ತು ಎಂದರೆ ಸರಿಯಲ್ಲ. ಸರ್ವೇ ನಂಬರ 35 ಮತ್ತು 36 ರಲ್ಲಿ ತಲಾ ಎರಡು ತುಕಡಿಗಳು ಇವೆ. ಸರ್ವೇ ನಂಬರ 35 ಮತ್ತು 36 ರಲ್ಲಿ ಬಸಪ್ಪ ಮತ್ತು ಶಂಕರ ಕಬ್ಜಾದಲ್ಲಿದ್ದಾರೆ . ಸದರಿ ಎರಡು ಜಮೀನುಗಳು ಬಿಳು ಇವೆ. ನಿಪಿ-89 ಮತ್ತು 90 ರಲ್ಲಿ ಕುಷ್ಕಿ ಜಮೀನು ಎಂದ ಬರೆದಿದೆ ಎಂದರೆ ಸರಿ. ಸರ್ವೇ ನಂಬರ 36 ರಲಿಸ್ಲಿ ಈ ವರ್ಷ ಪ್ರತಿವಾದಿಯರು ಕಾಯಿಪಲ್ಲೆ ಮತ್ತು ಬತ್ತ ಬೆಳೆದಿದ್ದರು ಎಂದರೆ ಸರಿಯಲ್ಲ. ಸರ್ವೆ ನಂಬರ 35 ರಲ್ಲಿ ಪ್ರತಿವಾದಿಯರು ಈ ವರ್ಷ ಬತ್ತ ಬೆಳೆದಿದ್ದರು ಎಂದರೆ ಸರಿಯಲ್ಲ. ಸರ್ವೆ ನಂಬರ 185, 363, 379, 254 ರಲ್ಲಿ ಪ್ರತಿವಾದಿಯರು ಕಬ್ಜಾದಲ್ಲಿದ್ದು ಅವರೇ ಬೆಳೆ ಬೆಳೆಯುತ್ತಿದ್ದಾರೆ ಎಂದರೆ ಸರಿಯಲ್ಲ. ದಾವಾ ಜಮೀನುಗಳ ಚೆಕ್ ಬಂದಿ ನನಗೆ ಗೊತ್ತಿಲ್ಲ. ನಾನು ದಾವಾ ಜಮೀನುಗಳಿಗೆ ಸಂಬಂಧಪಟ್ಟಿಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯದಲ್ಲಿ ರಾಜೀ ಸಂದಾನ ಆದಾಗಿನಿಂದ ಪ್ರತಿವಾದಿಯರು ದಾವಾ ಸ್ವತ್ತುಗಳಲ್ಲಿ ಕಬ್ಜಾದಲಿಲ ಇದ್ದಾರೆ ಎಂದರೆ ಸರಿಯಲ್ಲ. ನಾನು ಸುಳ್ಳು ದಾಖಲಾತಿಗಳನ್ನು ಹಾಜರುಪಡಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಸೇಡಂ.**